# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 845+885 |
| ಸದಸ್ಯರ ಹೆಸರು | : | ಶ್ರೀ ಕೆ. ಅಬ್ದುಲ್ ಜಬ್ಬಾರ್ + ನಸೀರ್ ಅಹ್ಮದ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 26-12-2022 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು |

***

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಮಹಾನಗರ ವ್ಯಾಪ್ತಿಯ ವಾರ್ಡ್ ನಂ.88 ಜೀವನ್ ಭೀಮಾನಗರದಲ್ಲಿ ಎರಡು 220 ಕೆ.ವಿ. ಲೈನ್ ಇರುವ ಕಾರಣ 2018 ರಲ್ಲಿ ಪೈಪ್ ಕಲ್ವರ್ಟ್ ಬ್ರಿಡ್ಜ್‌ನ್ನು ಸೆಗ್ಮೆಂಟಲ್ ಬ್ರಿಡ್ಜ್ ಆಗಿ ನಿರ್ಮಿಸುವ ಕಾಮಗಾರಿ ಸ್ಥಗಿತಗೊಂಡು ಅಲ್ಲಿನ ನಿವಾಸಿಗಳಿಗೆ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹೌದಾದಲ್ಲಿ, ಯಾವ ಕಾಲಮಿತಿಯಲ್ಲಿ 220 ಕೆ.ವಿ. ಲೈನ್ ಅನ್ನು ಸ್ಥಳಾಂತರಿಸಲು ಕೆಪಿಟಿಸಿಎಲ್ ಇಲಾಖೆಯಿಂದ ಕ್ರಮ ಕೈಗೊಳ್ಳಲಾಗುವುದು? | ಬೆಂಗಳೂರು ಮಹಾನಗರ ವ್ಯಾಪ್ತಿಯ ವಾರ್ಡ್ ನಂ.88 ಜೀವನ್ ಭೀಮಾನಗರದಲ್ಲಿ ಬಿ.ಬಿ.ಎಂ.ಪಿ ವತಿಯಿಂದ ಕವಿಪ್ರನಿನಿಯ ಯಾವುದೇ 220 ಕೆ.ವಿ ಲೈನಿನ ಸ್ಥಳಾಂತರದ ಪ್ರಸ್ತಾವನೆಯಿರುವುದಿಲ್ಲ.<br><br>ಆದರೆ, ಹೆಚ್.ಎ.ಎಲ್ 2ನೇ ಹಂತ, 17, 18 ನೇ ಮುಖ್ಯ ರಸ್ತೆ, ದೊಮ್ಮಲೂರು 2ನೇ ಹಂತ, ಕೇಂಬ್ರಿಡ್ಜ್ ಲೇಔಟ್, ಜೋಗುಪಾಳ್ಯ ಮತ್ತು ಸುತ್ತ ಮುತ್ತಲಿನ ಪ್ರದೇಶದ ಬಳಿಯಿರುವ ಹಳೆ ಚರಂಡಿ ಸೇತುವೆ ಕೆಳಗಿರುವ 220 ಕೆ.ವಿ ಭೂಗತ ಕೇಬಲ್ ಸ್ಥಳಾಂತರಿಸುವಂತೆ ಮುಖ್ಯ ಇಂಜಿನಿಯರ್, (ಎಸ್.ಡಬ್ಲ್ಯೂ.ಡಿ) ಬಿ.ಬಿಎಂ.ಪಿ ಇವರು ದಿನಾಂಕ: 09.09.2022 ರಂದು ಮುಖ್ಯ ಇಂಜಿನಿಯರ್(ವಿ), ಪ್ರಸರಣ ವಲಯ, ಕವಿಪ್ರನಿನಿ, ಬೆಂಗಳೂರು ಇವರನ್ನು ಕೋರಿರುತ್ತಾರೆ. ಸಂಬಂಧಪಟ್ಟ ಬಿ.ಬಿ.ಎಂ.ಪಿ ಅಧಿಕಾರಿಗಳೊಂದಿಗೆ ಸದರಿ ಸ್ಥಳ ಪರಿವೀಕ್ಷಣೆ ಮಾಡಿ, ಕಾಮಗಾರಿಯನ್ನು ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿ (Self Execution Basis) ಅಥವಾ ಠೇವಣಿ ವಂತಿಗೆ ಯೋಜನೆಯಡಿ (DCW) ಬಿ.ಬಿ.ಎಂ.ಪಿ ವತಿಯಿಂದಲೇ ಕೈಗೊಳ್ಳುವಂತೆ ಮುಖ್ಯ ಇಂಜಿನಿಯರ್, ಬಿ.ಬಿ.ಎಂ.ಪಿ ಇವರಿಗೆ ದಿನಾಂಕ: 13.09.2022 ಮತ್ತು 23.11.2022 ರಂದು ಪತ್ರದ ಮೂಲಕ ತಿಳಿಸಲಾಗಿರುತ್ತದೆ. |
| ಆ) | ಸುಮಾರು ಐದು ವರ್ಷ ಕಳೆದರು ಸಹ 220 ಕೆ.ವಿ. ಲೈನ್ ಸ್ಥಳಾಂತರಿಸದೇ ವಿಳಂಬವಾಗಲು ಕಾರಣವೇನು; | |
| ಇ) | ಸಾರ್ವಜನಿಕ ಹಿತದೃಷ್ಟಿಯಿಂದ ಸದರಿ ಸ್ಥಳದಲ್ಲಿ ಪೈಪ್ ಕಲ್ವರ್ಟ್ ಬ್ರಿಡ್ಜ್‌ನ್ನು ಸೆಗ್ಮೆಂಟಲ್ ಬ್ರಿಡ್ಜ್ ಆಗಿ ನಿರ್ಮಿಸುವ ಕಾಮಗಾರಿಗೆ ಅನುವಾಗಲು 220 ಕೆ.ವಿ. ಲೈನ್ ಅನ್ನು ಶೀಘ್ರವಾಗಿ ಸ್ಥಳಾಂತರಿಸಲಾಗುವುದೇ? | |

ಸಂಖ್ಯೆ: ಎನರ್ಜಿ 270 ಇಬಿಎಸ್ 2022

(ವಿ. ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು